ಅವರಿಗೇ ಗೊತ್ತಿಲ್ಲ. ಅವರು ತಮ್ಮ ಕಿರಿಯ ತಮ್ಮನ ಕೊಲೆ ಮಾಡಲು ಮುಂದಾಗಿದ್ದಾರೆ. ಅಂತಾರೆ, ಮುದುಕ ಕಿರುಚಬೇಡ. ಇಲ್ಲದೇ ಹೋದರೆ ನಿನ್ನನ್ನೇ ಜಜ್ಜಿ ಕೊಲ್ಲುತ್ತೇವೆ. ಈ ನನ್ನ ಗುಣವಂತ ಮಕ್ಕಳು ನನ್ನ ಅಪ್ಪನನ್ನೇ ಹೋಲುತ್ತಾರೆ; ಎಂದೂ ಅವರು ವಿರುದ್ಧ ಮಾತಾಡಿರಲಿಲ್ಲ. ಆದರಿಂದು... ಅಥವಾ ಅವರ ಇಂದಿನ ಮಾತೇ ಸತ್ಯವಾಗಿದೆಯೇ? ಇದೇ ಅವರ ನಿಜವಾದ ಧ್ವನಿಯೇ? ಸಭ್ಯ ಶಾಲೀನತೆಯ ಬುರ್ಖಾದಡಿಯಲ್ಲಿ ಕ್ರೂರತೆಯು ಪಸರಿಸಿರಬಹುದೇ? ಆದರೆ, ಅವರದ್ದಾದರೂ ಏನು ತಪ್ಪು? ಕಿರಿಯನ ತಲೆಯೊಳಗೆ ಹುಚ್ಚು ಹೊಕ್ಕಿದೆ. ಅವರ ಮಾಲ್‌ಗಳನ್ನು ಸುಟ್ಟು ಹಾಕುವುದಾಗಿ ಹೇಳುತ್ತಾನೆ. ಯುವಕರ ಸಂಘಟನೆ ಮಾಡುತ್ತಾನೆ. ಅವರ ತಲೆ ಕೆಡಿಸುತ್ತಾನೆ ಮತ್ತು ತನ್ನ ಅಣ್ಣಂದಿರು ಕಳ್ಳರು ಎಂದರಚುತ್ತಾನೆ. ಈ ದುನಿಯಾದಲ್ಲಿ ಅವನಂಥ ತಲೆ ತಿರುಕರು ಇರುತ್ತಾರೆ. ಅವರಿಗೆ ಜ್ಞಾನ ನೀಡುತ್ತಿರುತ್ತಾನೆ. ಅವರೂ ಕೆರಳುತ್ತಾರೆ. ಅಯ್ಯೋ ಹುಚ್ಚನೆ! ನಿನ್ನ ಬೆನ್ನು ಹತ್ತಿ ತಿರುಗುವವರು ಹಾಗೆ ಬಹಳವೇನಿಲ್ಲ. ಯಾರ ಯಾರ ಕೈಗೆ ಉರಿವ ಪಂಜು ನೀಡುತ್ತಿಯೇ? ಖಡ್ಗ ಕೊಡುತ್ತೀಯೇ? ನೀವು ಅದೆಷ್ಟು ಗೋದಾಮುಗಳನ್ನು ಧ್ವಂಸಗೊಳಿಸಬಲ್ಲಿರಿ? ಅದೆಷ್ಟು ಮಾಲ್‌ಗಳಿಗೆ ಬೆಂಕಿ ಹಚ್ಚಬಲ್ಲಿರಿ? ಮಾರಾಯ. ನಿನಗೆ ಅಪ್ಪ–ಅಜ್ಜಂದಿರ ದಂಧೆ ಬೇಡವಾಗಿದ್ದರೆ ಮಾಡಬೇಡ. ಆದರೆ, ಯಾರು ಮಾಡುತ್ತಾರೋ ಅವರಿಗಾದರೂ ಶಾಂತವಾಗಿ ಮಾಡಲು ಬಿಡು. ನೀನು ನಮ್ಮ ಹೊಟ್ಟೆಯ ಮೇಲೆ ಕಾಲಿಡಲು ಮುಂದಾದರೆ, ನಿನ್ನ ಅಪ್ಪ ಸುಮ್ಮನಿರಬಹುದು, ಆದರೆ, ಸೋದರರೇಕೆ ಸುಮ್ಮನಿರುತ್ತಾರೆ? ಮುರ್ಖನೇ, ನೀನು ದೇಶದ್ರೋಹಿ ಎಂಬ ಫತ್ವಾ ಹೊರಬಿದ್ದಿದೆ. ನಿನ್ನ ಮೃತ್ಯುದಂಡದ ಬಗೆಗೆ ಗೋಡೆ–ಗೋಡೆಯ ಮೇಲೆ ಪೋಸ್ಟರ್ಸ್ ಅಂಟಿಸಬಹುದು. ಒಂದೋ ಪೊಲೀಸರೆ ನಿನ್ನ ಮೇಲೆ ಗುಂಡು ಹಾರಿಸಬಹುದು. ಇಲ್ಲವೇ ಅಣ್ಣಂದಿರೇ ನಿನ್ನನ್ನು ಸೀಳಿ ಹಾಕಬಹುದು. ಹೇಗಾದರೂ ಸಾಯುತ್ತಿಯೇ ನೀನು. ಆದರೆ, ಹೇಳಿದ ಮಾತು ಕೇಳಲಾರೆ. ನೀನು ನಿನ್ನ ತಾಯಿಯಂತೆ ಹಟವಾದಿ ಎನ್ನುವುದು ನನಗೀಗ ಗೊತ್ತು.

ಆದರೆ, ಇದೆಂಥ ಶಾಂತತೆ? ಯಾವ ಸ್ಮಶಾನ ಶಾಂತತೆಯಲ್ಲಿ ನನ್ನ ದಂಧೆ ಸಾಗಿದೆ? ಯಾವ ಸ್ತಬ್ಧತೆಯ ವ್ಯವಹಾರವಿದು? ನಾದುರುಸ್ತ ಬಂದೂಕಿನ ಸೌದಾ ಮಾಡಿ ಎಳೆ ವಯಸ್ಸಿನ ಸೋದರ ಬಟಾಲಿಯನ್‌ಅನ್ನು ಬಲಿದಾನ ನೀಡಲು ಸೀಮೆಯ ಮೇಲೆ ಕಳಿಸಲಾಗಿದೆ. ಒಂದು ಆದಿವಾಸಿ ಹಾಡಿಯನ್ನು ಒಂದೇ ರಾತ್ರಿಯಲ್ಲಿ ದೊಡ್ಡ ಸಾಹೇಬರ ಹೆಸರಿಗೆ ಮಾಡಿಕೊಡಲಾಯಿತು. ಕತ್ತರಿಸಿದ ಗೋಣುಗಳ ಚಿತ್ಕಾರ, ಮನೆಗಳನ್ನು ಉರುಳಿಸಿ ಬೀದಿಪಾಲು ಮಾಡಿದವರ ಆಕ್ರೋಶವು ಶಾಂತವಾಗಿ ದುಡ್ಡು ಎಣಿಸುವ ಬಾಬೂ ನಿನಗೆ ಕೇಳಿಸಲಿಲ್ಲವೇ? ನಕಲಿ ಬೀಜ ದಿಯಾ ಕಿಸಾನೋಂಕೆ ಹಾಥೋ ಮೆ ಬೋನೆ ಕೇಲಿಯೆ ಔರ್ ಉನ್ಹೆ ಮರನೇಕೆಲಿಯೇ ಛೋಡ ದಿಯಾ. ದಲಾಲರನ್ನು ನಿರ್ದೋಷ ಬಿಡುಗಡೆ ಮಾಡಲು ಬಾಬೂ ನೀನೇ ಅಲ್ಲವೆ ಪುರಾವೆ ತಂದುಕೊಟ್ಟದ್ದು? ನೀನೇಕೆ ಆಗ ಸುಮ್ಮನಿದ್ದೆ! ಅಥವಾ ನಿನ್ನ ಮೌನ ಮತ್ತು ತೊಳಲಾಟವಷ್ಟೇ ಇದೆಯೇ? ಕನ್‌ಫ್ಯೂಜನ್. ಬಹೋತ್ ಕನ್‌ಫ್ಯೂಜನ್ ಹೈ. ಈಗಲೂ ಕನ್‌ಫ್ಯೂಜ್ಡ್ ಆಗಿರುವೆ ಬಾಬೂ ನೀನು. ಹೀಗಾಗಿ, ಅಪ್ಪ ನಿನಗೆ ಅಜ್ಞಾನಿ, ಬುದ್ಧಿಗೇಡಿ ಅಂತಿದ್ದ. ಸತತ ಹೊಡೆಯುತ್ತಿದ್ದ. ಹೊಡೆತ ತಿಂದು ತಿಂದು ಬಾಬೂನ ತಲೆ ಜಡಗೊಂಡಿದೆ. ಮೊದಲು ಬಹಳ ಓದುತ್ತಿದ್ದೆ. ಡುಪ್ಲಿಕೇಟ್ ಕಾಪಿಗಾಗಿ ದೊಡ್ಡ ದೊಡ್ಡ ಗ್ರಂಥಗಳು ಬರುತ್ತಿದ್ದವು. ಅವನ್ನು ಓದಿಯೆ ಪ್ರಶ್ನೆಗಳು ಉದ್ಭವಿಸಿದ್ದು. ಆದರೆ, ತಲೆ ಜಡವಾಗುತ್ತ ಸಾಗಿದಂತೆ ಪ್ರಶ್ನೆ ಕಾಡುವುದು ನಿಂತಿತು. ಅನಂತರ ಓದಿನ ಕಡೆಗೆ ಲಕ್ಷ್ಯ ಹೋಗದಾಯಿತು. ಪುಸ್ತಕದ ಹವ್ಯಾಸವಷ್ಟೇ ಬಿಟ್ಟು ಬಿಟ್ಟೆ. ಆದರೆ, ಆ ಹವ್ಯಾಸ ಪಾರೂಗೆ ಅಂಟಿಕೊಂಡಿತು. ನನ್ನೊಂದಿಗೆ ಮದುವೆ ಮಾಡಿಕೊಂಡಿದ್ದರ ಲಾಭವೆನ್ನಬಹುದು. ಅತ್ತೆಯ ಕಣ್ಣು ತಪ್ಪಿಸಿ ನನ್ನನ್ನು ಭೇಟಿಯಾಗಲು ಅಂಗಡಿಗೆ ಬರುತ್ತಿದ್ದಳು. ತುಂಬ ಮುಗ್ಧೆ, ಜಾಣೆಯಾಗಿದ್ದಳು. ಅಂಗಡಿಯ ಮೇಲೆ ನನ್ನ ಲಕ್ಷ್ಯ ಕಡಿಮೆ. ಪಾರೂವಿನ ಆಗಮನದ